ದಿಃ 16.04.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1131/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜೆ.ಹೆಚ್.ರಮೇಶ | ಪ್ರಾ ಸಾಃ 5 |
| ತಂದೆಯ/ಗಂಡನ ಹೆಸರು | : | ಹುಲಿಕುಂಟ ಶೆಟ್ಟಿ | ಚಾಸಾಃ 11 |
| ವಯಸ್ಸು | : | 44 ವರ್ಷ | |
| ಕೆಲಸ | : | ಪೊಲೀಸ್ ಮುಖ್ಯ ಪೇದೆ,<br>ಐ.ಜಿ.ಪಿ ಕಛೇರಿ, ದಾವಣಗೆರೆ | ಸಾ ಪ್ರ ಬೋ |
| ವಾಸ | : | ದಾವಣಗೆರೆ | ದಿಃ16.04.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು 2020 ರಿಂದ 2025 ರವರೆಗೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 15.07.2023 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ, ಸಂಜೆ 06.30 ರ ಸಮಯದಲ್ಲಿ ಚಾಸಾ-1 ರವರು ನೀಡಿದ ವರದಿಯನ್ನು ಸ್ವೀಕರಿಸಿಕೊಂಡು, ಠಾಣಾ ಮೊಕದ್ದಮೆ ಸಂಖ್ಯೆ.115/2023 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ವರದಿ ಮಾಡಿರುತ್ತೇನೆ. ಸಾಕ್ಷಿ ವರದಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಚಾಸಾ-1 ರವರು ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲಿನೊಂದಿಗೆ ಪಂಚನಾಮೆಯನ್ನು ಹಾಜರುಪಡಿಸಿದ್ದು, ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲನ್ನು ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾಸಾ-1 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 01.08.2023 ರಂದು ಚಾಸಾ-9 ರವರ ಮೂಲಕ ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 10.09.2023 ರಂದು ಚಾಸಾ-12 ರವರಿಗೆ ಪ್ರಕರಣದ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

ದಿಃ 16.04.2026

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ.ಎಸ್.ವಿ.ಕೆ ವಕೀಲರಿಂದ</u>**

3. ನಿಪಿ-6 ನ್ನು ನಾನೇ ಬೆರಳಚ್ಚು ಮಾಡಿಸಿಕೊಂಡು ಚಾಸಾ-1 ರವರ ಸಹಿಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿನ ಬರವಣಿಗೆ ನನ್ನದಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರಿಂದ 5 ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಛಾಯಾಚಿತ್ರವನ್ನು ಪ್ರಕರಣದ ಸಲುವಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪನ್ನು ಎಸಗದಿದಾಗ್ಯೂ ಚಾಸಾ-1 ರವರು ನನ್ನ ಮೇಲಾಧಿಕಾರಿಯಾದ ಕಾರಣ ಸದರಿರವರ ನೀಡಿದ ಸುಳ್ಳು ದೂರಿನ ಆಧಾರದಲ್ಲಿ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.